‘ಕನೀನಃ ಪರಃ ಸರ್ವೋತ್ತಮೋ ಬಾದರಾಯಣಃ’ ಎಂಬ ವಾಕ್ಯವಿಮರ್ಶೆಯಿಂದ ವೇದವ್ಯಾಸರಲ್ಲಿ ಕನೀನಶಬ್ದವು ಅಪತ್ಯಾರ್ಥದಲ್ಲಿಲ್ಲ ಎಂಬುದರ ಸ್ಪಷ್ಟನೆ.

ಶ್ರೀವೇದವ್ಯಾಸದೇವರಲ್ಲಿ ಸಂಪೂರ್ಣಾಧ್ಯಯನವನ್ನು ನಡೆಸಿರುವ ಶ್ರೀಮದಾನಂದತೀರ್ಥಭಗವತ್ಪಾದರು ‘‘ಕರ್ಮನಿರ್ಣಯ’’ ಗ್ರಂಥದಲ್ಲಿ ‘ಅತೀದು ಶಕ್ರ ಓಹತ’ ಎನ್ನುವ ಶ್ರುತಿಯಲ್ಲಿಯ ‘ಭಿನತ್ ಕನೀನ ಓದನಂ ಪಚ್ಯಮಾನಂ ಪರೋ ಗಿರಾ’ ಎಂಬ ಶ್ರುತಿಭಾಗಕ್ಕೆ ‘ಅಭಿನದ್ ಭಗವಾನ್ ಕಾನೀನೋ ಬಾದರಾಯಣಃ’ ಎಂಬುದಾಗಿ ವ್ಯಾಖ್ಯಾನ ಮಾಡಿರುವರು. ಈ ಬಗ್ಗೆ ಸರ್ವಜ್ಞಕಲ್ಪರಾದ ಶ್ರೀಮಟ್ಟೀಕಾಕೃತ್ಪಾದರು ‘ಕಾನೀನ’ಶಬ್ದಕ್ಕೆ ಟೀಕೆ ಬರೆಯುತ್ತಾ ‘ಕನ್ಯಾಯಾಃ ಕನೀನ ಚ । ವೃದ್ಧ್ಯಭಾವಶ್ಛಾಂದಸಃ । ಅಪತ್ಯತ್ವೋಕ್ತ್ಯಾ ಪ್ರಾಪ್ತಂ ಪ್ರಾಕೃತತತ್ವಭ್ರಾಂತಿಮಪಾಕರ್ತುಂ ಪರ ಇತ್ಯುಕ್ತಮ್’ ಎಂದು ಅಪ್ಪಣೆ ಕೊಡಿಸಿದರು. ಈ ಟೀಕಾವಚನಕ್ಕೆ ವಿವರಣೆಯನ್ನು ನೀಡುತ್ತಾ ಶ್ರೀಮದ್ರಾಘವೇಂದ್ರತೀರ್ಥರು ತಮ್ಮ ‘ಭಾವದೀಪ’ದಲ್ಲಿ ಹೀಗೆ ಹೇಳಿರುವರು. ‘ಕನೀನ ಇತ್ಯಸ್ಯ ಕಾನೀನ ಇತ್ಯುಕ್ತಿಂ ಸಾಧಯತಿ – ನ ತು ಕನ್ಯಾಯಾ ಇತಿ । ಕನ್ಯಾಶಬ್ದಾದಪತ್ಯೇಽರ್ಥೇ ಪರಃ ಪ್ರತ್ಯಯಃ ಕನ್ಯಾ ಪದಸ್ಯ ಕನೀನಾದೇಶ್ಚ ಭವತೀತಿ ಸೂತ್ರಾರ್ಥಃ । ತರ್ಹಿ ತದ್ಧಿತ್ಯೇಷ್ವಚಾಮಾದೇಃ ಇತಿ ವೃದ್ಧ್ಯಾಭಾವ್ಯಮ್ । ಮಂತ್ರೇ ಕಥಂ ಕನೀನ ಇತ್ಯುಕ್ತಿರಿತ್ಯತ ಆಹ – ವೃದ್ಧ್ಯಭಾವ ಇತಿ ಅಪತ್ಯತ್ವೋಕ್ತ್ಯೈರಿತಿ । ಛಾಂದಸ ಕನೀನಶಬ್ದೇನೇತಿ ಭಾವಃ । ತಥೇತಿ । ಪ್ರಾಕೃತತತ್ವಭ್ರಮನಿರಾಸೋ ಯಥಾ ಭವತಿ ತಥೇತ್ಯರ್ಥಃ ॥

ಇಲ್ಲಿ ಸರ್ವಜ್ಞಕಲ್ಪರಾದ ಶ್ರೀಟೀಕಾಚಾರ್ಯರು ಉದಾಹರಿಸಿದ ‘ಕನ್ಯಾಯಾಃ ಕನೀನ ಚ’ ಎಂಬ ಪಾಣಿನಿ ಸೂತ್ರದಲ್ಲಿ ‘ಯೋಗವಿಭಾಗಾದಿಷ್ಟಸಿದ್ಧಿಃ’ ಎಂಬ ವ್ಯಾಕರಣ ಪರಿಭಾಷಾನುಸಾರವಾಗಿ ‘ಕನ್ಯಾಯಾಃ’ ಎಂದೂ ಮತ್ತು ‘ಕನೀನ ಚ’ ಎಂದೂ ಪಾಣಿನಿ ಸೂತ್ರವನ್ನು ಎರಡಾಗಿ ವಿಭಾಗ ಮಾಡಬೇಕು. ಇದರಲ್ಲಿ ಮೊದಲನೆಯ ‘ಕನ್ಯಾಯಾಃ’ ಎಂಬ ಯೋಗಕ್ಕೆ, ಅಂದರೆ ಸೂತ್ರಕ್ಕೆ ಅಪತ್ಯಾರ್ಥದಲ್ಲಿ ‘ಕಾನೀನ’ಶಬ್ದ ಸಿದ್ಧಿಸುವುದು. ಇಲ್ಲಿ ಕಾನೀನಃ ಅಂದರೆ ಕರ್ಣ ಎಂದರ್ಥ. ಕೆಳಸೂತ್ರದಿಂದ ಮೇಲಿನ ಸೂತ್ರಕ್ಕೆ ಕನೀನ ಎಂಬ ಪದವನ್ನು ಅನುವೃತ್ತಿ ಮಾಡಿಕೊಳ್ಳತಕ್ಕದ್ದು. ಇದನ್ನೇ ಅಪಕರ್ಷಾನುವೃತ್ತಿ ಎಂದೆನ್ನುವರು. In rare cases, it is taken backwards in a sutra work from a subsequent rule to a previous rule, when it is called

ಅಪಕರ್ಷಾನುವೃತ್ತಿ. ಈ ವ್ಯಾಖ್ಯಾನವು ಅಪತ್ಯಾರ್ಥದಲ್ಲಿ ಕುಂತೀಗರ್ಭಸಂಜಾತನಾದ ಕರ್ಣನ ವಿಷಯದಲ್ಲಿ ಸರಿಹೋಗುವುದು. ಕಾನೀನಃ=ಕರ್ಣಃ ಆದರೆ ಅಗಣ್ಯಗುಣಮಂಡಿತನು, ಸರ್ವೋತ್ತಮನಾದ ಶ್ರೀವೇದವ್ಯಾಸರ ವಿಷಯದಲ್ಲಿ 'ಕನೀನ ಚ' ಎಂಬ ಸೂತ್ರವನ್ನು ಯೋಜನೆ ಮಾಡತಕ್ಕದ್ದು. ಇಲ್ಲಿ ಕೇವಲ ಸ್ವಾರ್ಥದಲ್ಲಿ ಮಾತ್ರವೇ ತದ್ಧಿತಪ್ರತ್ಯಯ ಬರುವುದು. ಅಪತ್ಯಾರ್ಥದಲ್ಲಿ ಅಲ್ಲವೇ ಅಲ್ಲ. ಆದ ಕಾರಣ 'ಕನೀನ ಏವ ಕಾನೀನಃ' ಎಂದು ವ್ಯಾಖ್ಯಾನಿಸಬೇಕು. ಸರ್ವಜ್ಞಕಲ್ಪರಾದ ಶ್ರೀಮಟ್ಟೀಕಾಕೃತ್ಪಾದರು ಇಂತಹ ರಹಸ್ಯಾಭಿಪ್ರಾಯವನ್ನೇ ಹೃದಯ-ದಲ್ಲಿಟ್ಟುಕೊಂಡು 'ಕನ್ಯಾಯಾಃ ಕನೀನ ಚ' ಎಂಬ ಪಾಣಿನೀ ಸೂತ್ರವನ್ನು-ದಾಹರಿಸಿರುವರು. ಶ್ರೀಟೀಕಾರಾಯರ ಹೃದಯವು ಶ್ರೀವೇದವ್ಯಾಸರ ವಿಷಯದಲ್ಲಿ ಅಪತ್ಯಾರ್ಥವು ಅಲ್ಲವೇ ಅಲ್ಲ. ಕೇವಲ 'ಸ್ವಾರ್ಥ'ದಲ್ಲಿ ಮಾತ್ರವೇ ಎಂದು ಶ್ರೀಜಯತೀರ್ಥಶ್ರೀಮಚ್ಚರಣರ ಆಕೂತವು. ಈ ರಹಸ್ಯವನ್ನೇ ಮನಸ್ಸಿನಲ್ಲಿಟ್ಟುಕೊಂಡು ಶ್ರೀಮನ್ಮಂತ್ರಾಲಯಮಹಾಪ್ರಭುಗಳು ಈ ಋಗರ್ಥವನ್ನೇ ವ್ಯಾಖ್ಯಾನಿಸುತ್ತಾ **'ಕನೀನಃ ಪರಃ ಸರ್ವೋತ್ತಮೋ ಬಾದರಾಯಣಃ'** ಎಂದು ಸುಸ್ಪಷ್ಟವಾಗಿ ಪ್ರತಿಪಾದಿಸಿರುವರು. ಅಂದರೆ 'ಕನೀನಃ ಕಮನೀಯೋ ಭವತಿ' ಎನ್ನುವ ನಿರುಕ್ತಶಾಸ್ತ್ರವಚನಾನುಸಾರವಾಗಿ 'ಕನೀನಃ = ಕಮನೀಯಃ = ಅತ್ಯಂತಸುಂದರಾಕೃತಿಃ ಪರಃ ಸರ್ವೋತ್ತಮೋ ಬಾದ-ರಾಯಣಃ' ಎಂಬುದಾಗಿ ಶ್ರೀಮನ್ಮಧ್ವರಾಯರ ಆಶಯವೆಂದು ಶ್ರೀಟೀಕಾಕೃತ್ಪಾದರ ಹಾರ್ದವೆಂದು ಶ್ರೀಮಂತ್ರಾಲಯಪ್ರಭುಗಳ ಅಭಿಪ್ರಾಯವು. ಈ ವಿಷಯವನ್ನೇ ಪುನಃ ನಿರ್ಧಾರಣೆ ಮಾಡುತ್ತಾ ಅವ್ಯವಹಿತಕರ್ಮನಿರ್ಣಯೋದಾಹೃತ **'ಅರ್ಭಕೋ ನ ಕುಮಾರಕೋ'** ಎನ್ನುವ ಮಂತ್ರವನ್ನು ವ್ಯಾಖ್ಯಾನಿಸುವ ಸಂದರ್ಭದಲ್ಲಿ ಶ್ರೀಟೀಕಾ-ಕೃತ್ಪಾದರು **'ನ ಹಿ ಕುಮಾರಕೋ ನ ಕಸ್ಯಾಪ್ಯಪತ್ಯಮ್'** ಎಂಬುದಾಗಿ ವ್ಯಾಖ್ಯಾನಿಸಿ ಸಾತ್ವಿಕಜನರನ್ನನುಗ್ರಹಿಸಿದರು. ಈ ಪರಮರಹಸ್ಯವಾದ ಶ್ರೀಟೀಕಾಕೃತ್ಪಾದರ ವಚನವನ್ನು ವಿವರಣೆ ಮಾಡುತ್ತಾ ಶ್ರೀಮಂತ್ರಾಲಯಪ್ರಭುಗಳು **'ಕನೀನಶಬ್ದೋ ವ್ಯಾಸ ಉಪಚರಿತಃ ಪ್ರಕಾರಾಂತರೇಣ ವಾ ನಿರ್ವಕ್ತಿ'** ಎಂದು ಸ್ಪಷ್ಟೀಕರಿಸುತ್ತಾ ಋಗರ್ಥದಲ್ಲಿ **'ಯದ್ವಾ ನ ಕುಮಾರಕಃ ನ ಕಸ್ಯಾಪ್ಯಪತ್ಯಭೂತಃ'** ಎಂದು ನಿರೂಪಿಸಿರುವರು. ಏತಾವತಾ ಶ್ರೀವೇದವ್ಯಾಸರ ವಿಷಯದಲ್ಲಿ ಅಪತ್ಯಾರ್ಥಕ ತದ್ಧಿತ ಪ್ರತ್ಯಯವು ಬರುವುದೇ ಇಲ್ಲವೆಂದು ಈ ಮೂರ್ವರ ನಿಶ್ಚಿತಾಭಿಪ್ರಾಯವು.

ಶ್ರೀಮನ್ಮಧ್ವಗುರುಗಳ 'ಕಾನೀನೋ ಬಾದರಾಯಣಃ' ಎಂಬ ವಾಕ್ಯಗತ ಕನೀನಶಬ್ದವು ಕೇವಲ ಸ್ವಾರ್ಥದಲ್ಲೇ ಪ್ರಯೋಗಿಸಲ್ಪಟ್ಟಿದೆ. 'ಕನೀನ ಏವ ಕಾನೀನಃ'

ಎಂಬುದಾಗಿ ಈ ವಾಕ್ಯಾರ್ಥವು. ಶ್ರೀಬಾದರಾಯಣರ ವಿಷಯದಲ್ಲಿ 'ಕನ್ಯಾಯಾ ಅಪತ್ಯಂ' ಎಂದು ವ್ಯಾಖ್ಯಾನಿಸಬಾರದು. ಅಪತ್ಯಾರ್ಥದಲ್ಲಿಯಾದರೆ ಶ್ರೀಮನ್ಮಹಾಭಾರತಶಾಸ್ತ್ರಕ್ಕೆ ವಿರುದ್ಧವು. ಕಾರಣ ಪತಂಜಲಮಹಾಭಾಷ್ಯದಲ್ಲಿ 'ಕನ್ಯಾಯಾಃ ಕನ್ಯೋಕ್ತಾಯಾಃ ಕನ್ಯಾಭಿಮತಾಯಾಃ ಸುದರ್ಶನಾಯಾ ಯದಪತ್ಯಂ ಸ ಕಾನೀನ ಇತಿ'(4/1/116) ಎಂದು ವ್ಯಾಖ್ಯಾನಿಸಲ್ಪಟ್ಟಿದೆ. ಈ ಬಗ್ಗೆ ಪ್ರದೀಪಕಾರ ಕೈಯ್ಯಟೋಪಾಧ್ಯಾಯನು 'ಸುದರ್ಶನಾಯಾ ಇತಿ । ಪ್ರಕಟದರ್ಶನಾಯಾಃ ಅಗುಪ್ತತ್ವಾದಿತ್ಯರ್ಥಃ । ಅನ್ಯೇತ್ವಾಹುಃ । ಮುನಿದೇವತಾ ಮಹಾತ್ಮ್ಯಾದ್ವಾ ಪುಂಯೋಗೇಽಪ್ಯಕ್ಷತ ಯೋನಿರ್ಭವತಿ । ಯಥಾ ಕುಂತೀ ಮಂತ್ರಾಹೂತದಿನಕರೋತ್ಪಾದಿತಕರ್ಣಾಖ್ಯಪುತ್ರಾಪಿ ಪುನಃ ಕನ್ಯೈವಾಭೂತ್ । ತದಪತ್ಯಂ ಕಾನೀನಶಬ್ದಾಭಿಧೇಯಮ್ ।'. ಇದನ್ನೇ ಪ್ರದೀಪೋದ್ಯೋತಕಾರನಾದ ನಾಗೇಶಭಟ್ಟನು ಸ್ಪಷ್ಟೀಕರಿಸಿದನು. ಅಂತತೋಗತ್ಯಾ ಮಹಾಭಾಷ್ಯಕಾರನಾದ ಪತಂಜಲಿ, ಕೈಯ್ಯಟೋಪಾಧ್ಯಾಯ, ನಾಗೇಶಭಟ್ಟ 'ಕಾನೀನಃ = ಕರ್ಣಃ' ಎಂದು ಉದಾಹರಿಸಿ ವ್ಯಾಖ್ಯಾನಿಸಿರುವರೇ ಹೊರತು 'ಕಾನೀನೋ ವ್ಯಾಸಃ' ಎಂದು ಹೇಳಲಿಲ್ಲ. ಇದನ್ನು ಸಾತ್ವಿಕರು ಗಮನಿಸತಕ್ಕದ್ದು. ಇದೇ ವಿಷಯವನ್ನು ಶ್ರೀಭಾವಿಸಮೀರರೂ, ಅಸಮಸಮರೂ ಆದ ಶ್ರೀವಾದಿರಾಜಪೂಜ್ಯಚರಣರು ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಭಾವಪ್ರಕಾಶಿಕೆ (10/47)ಯಲ್ಲಿ ಹೀಗೆ ಸಾತ್ವಿಕಜನೋದ್ಧಾರಾರ್ಥವಾಗಿ ವಿಪುಲೀಕರಿಸಿದರು —

'ಉತ್ತಾರಯಂತೀಮಥೇತ್ಯತ್ರ ಅಥಶಬ್ದೇನ ವಸಿಷ್ಠಯಾಜ್ಞವಲ್ಕ್ಯಾದೀನಾಂ ಸದಸಿ ವಿವಾಹಹೋಮೇ ಕೃತೇ ಸತಿ ಪಿತ್ರಾ ವಸುಚಕ್ರವರ್ತಿನಾ, ಧಾರಾಪೂರ್ವಕಂ ದಾನಾಂತರಮಿತಿ ಭಾರತೇ ಪ್ರಸಿದ್ಧಕಥಾಂ ಸ್ಮಾರಯತಿ । ಏವಂ ಚ ಸಮುದ್ರಗಾಂ ಮಾರ್ತಂಡಸುತಾಂ ಯಮುನಾಂ ತಾರಯಂತೀಂ ತಾಂ ಕನ್ಯಾಂ ಅಧಿಜಗಾಮೇತಿ ಯೋಜನಾ । ತಸ್ಮಾತ್ 'ಕಾನೀನೋ ವ್ಯಾಸಃ' ಇತಿ ಯದವಿದುಷಾಂ ವಚನಂ ತದ್ಭಾರತಕಥಾಪರಿಜ್ಞಾನಶೂನ್ಯತ್ವನಿಮಿತ್ತಮ್ । ವ್ಯಾಸಸ್ಯ ತು ಜನ್ಮ ಭಾರತೋಕ್ತರೀತ್ಯಾ ಪರಮ ಸುಶೋಭನಮೇವೇತಿ ಮಹಾಭಾರತತಾತ್ಪರ್ಯನಿರ್ಣಯಕೃತೋ ಭಾವಃ ॥' ಎಂದು.

ಹೀಗಿರಲಾಗಿ ಸರ್ವೋತ್ತಮರಾದ ಶ್ರೀವೇದವ್ಯಾಸರಿಗೆ ಗರ್ಭವಾಸಾದಿ ಕ್ಲೇಶಗಳೆಲ್ಲಿ? 'ಯಥಾ ನರಸಿಂಹಾಕೃತಿರಾವಿರಾಸೀತ್' ಎಂಬುವ ನಿರ್ಣಯವಚನದಂತೆ ಎಂದು ತಿಳಿಯತಕ್ಕದ್ದು. ವಸಿಷ್ಠ, ಯಾಜ್ಞವಲ್ಕ್ಯಾದಿಗಳ ಸಮಕ್ಷಮದಲ್ಲಿ ವಿವಾಹಹೋಮಪ್ರಕ್ರಿಯಕ್ಕನುಸಾರವಾಗಿ ವಸುಚಕ್ರವರ್ತಿ ಧಾರಾಪೂರ್ವಕವಾಗಿ ಪರಾಶರರಿಗೆ

ಕನ್ಯಾದಾನ ಮಾಡಿದರೆಂಬುದಾಗಿ ಭಾರತಾಖ್ಯಾಯಿಕೆಯುಂಟೆಂದು ಶ್ರೀಭಾವಿಸಮೀರರು ಪ್ರತಿಪಾದಿಸುತ್ತಾ, 'ಕಾನೀನೋ ವ್ಯಾಸಃ (ಕನ್ಯಾಯಾ ಅಪತ್ಯಂ ಪುಮಾನ್) ಎಂದು ಅವಿದ್ವಾಂಸರಾಧ ಮೂಢರು ಅರ್ಥಾತ್ ಕಾಶಿಕಾವೃತ್ತಿಕಾರನಾದ ಜಯಾದಿತ್ಯನು, ಅವನ ಅನುಯಾಯಿಗಳು ಭಾರತಕಥಾಪರಿಜ್ಞಾನಶೂನ್ಯರು ಎಂದು ಆಕ್ಷೇಪಿಸಿದರು. ಶ್ರೀವೇದವ್ಯಾಸರ ಜನ್ಮ, ವಿವಾಹಾನಂತರವೇ ಜರುಗಿದೆ ಎಂದೂ, ಅದು ಪರಮ-ಶೋಭನವೆಂದೂ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಕಾರರಾದ ಶ್ರೀಮಧ್ವಾ-ಚಾರ್ಯರ ಭಾವವು ಇದೇ ಎಂಬುದಾಗಿ ಶ್ರೀಭಾವಿಸಮೀರರು ಸ್ಪಷ್ಟಗೊಳಿಸಿದರು.

ಆದರೆ ಕೆಲವು ಆಧುನಿಕರು ಭಾವಪ್ರಕಾಶಿಕಾಗ್ರಂಥೋಕ್ತ ಈ ಸಂದರ್ಭವನ್ನೂ ಪ್ರಕ್ಷಿಪ್ತವೆನ್ನುತ್ತಾರೆ. 'ಸತ್ಯವತಿ, ಪರಾಶರರ ವಿವಾಹವಾಗಿಲ್ಲ' ಎಂದೇ ಶ್ರೀಮನ್ಮಹಾ-ಭಾರತೋಕ್ತಿ ಮತ್ತು ಸತ್ಯವತಿಯ ಕನ್ಯಾವಸ್ಥೆಯಲ್ಲಿಯೇ ಶ್ರೀವೇದವ್ಯಾಸರು ಜನಿಸಿದರು ಎಂದು ಪ್ರತಿಪಾದಿಸುತ್ತಿರುವರು. ಆದರೆ ಈ ವಾದವು ಸರಿಯಲ್ಲ. ಇದು ದುರ್ವಾದ. ಸಚ್ಛಾಸ್ತ್ರವಿರುದ್ಧ.

ಶ್ರೀಮನ್ಮಹಾಭಾರತವೂ ಕೂಡ ಶ್ರೀಸತ್ಯವತೀ-ಪರಾಶರರ ಅಭೂತಪೂರ್ವವಾದ ವಿವಾಹವನ್ನು ಚಿತ್ರಿಸುತ್ತದೆ. ತದ್ಯಥಾ —

ವೈಶಂಪಾಯನ ಉವಾಚ –
ಯಾಜ್ಞ್ಯವಲ್ಕ್ಯಂ ಸಮಾಹೂಯ ವಿವಾಹಾಚಾರ್ಯಮಿತ್ಯುತ ।
ವಸುಂ ಚಾಪಿ ಸಮಾಹೂಯ ವಸಿಷ್ಠೋ ಮುನಿಭಿಃ ಸಹ ॥
ವಿವಾಹಂ ಕಾರಯಾಮಾಸ ವಿಧಿದೃಷ್ಟೇನ ಕರ್ಮಣಾ ।
ವಸುರುವಾಚ –
ಪರಾಶರ ಮಹಾಪ್ರಾಜ್ಞ ತವ ದಾಸ್ಯಾಮ್ಯಹಂ ಸುತಾಮ್ ।
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ॥
ವೈಶಂಪಾಯನ ಉವಾಚ –
ವಸೋಸ್ತು ವಚನಂ ಶ್ರುತ್ವಾ ಯಾಜ್ಞವಲ್ಕ್ಯಮತೇ ಸ್ಥಿತಃ ।
ಕೃತಕೌತುಕಮಾಂಗಲ್ಯಃ ಪಾಣಿನಾ ಪಾಣಿಮಸ್ಪೃಶತ್ ॥
ಪ್ರಭೂತಾಜ್ಯೇನ ಹವಿಷಾ ಹುತ್ವಾ ಮಂತ್ರೈರ್ಹುತಾಶನಮ್ ।
ತ್ರಿರಗ್ನಿಂ ತು ಪರಿಕ್ರಮ್ಯ ಸಮಭ್ಯರ್ಚ್ಯ ಹುತಾಶನಮ್ ॥
ಮಹರ್ಷೀನ್ ಯಾಜ್ಞ್ಯವಲ್ಕ್ಯಾದೀನ್ ದಕ್ಷಿಣಾಭಿಃ ಪ್ರತರ್ಪ್ಯ ಚ ।
ಲಬ್ಧಾನುಜ್ಞೋಽಭಿವಾದ್ಯಾಶು ಪ್ರದಕ್ಷಿಣಮಥಾಕರೋತ್ ॥

ಪರಾಶರೇ ಕೃತೋದ್ವಾಹೇ ದೇವಾಃ ಸರ್ಷಿಗಣಾಸ್ತದಾ ।
ಹೃಷ್ಟಾ ಜಗ್ಮುಃ ಕ್ಷಣಾದೇವ ವೇದವ್ಯಾಸೋಽಭವತ್ವಿತಿ ॥
ಏವಂ ಸತ್ಯವತೀ ಹೃಷ್ಟಾ ಪೂಜಾಂ ಲಬ್ಧ್ವಾ ಯಥೇಷ್ಟತಃ ।
ಪರಾಶರೇಣ ಸಂಯುಕ್ತಾ ಸದ್ಯೋ ಗರ್ಭಂ ಸುಷಾವ ಸಾ ॥
ಜಜ್ಞೇ ಚ ಯಮುನಾದ್ವೀಪೇ ಪಾರಾಶರ್ಯಃ ಸ ವೀರ್ಯವಾನ್ ।
ಜಾತಮಾತ್ರಃ ಸ ವವೃಧೇ ಸಪ್ತವರ್ಷೋಽಭವತ್ ತದಾ ॥
ಸ್ನಾತ್ವಾಽಭಿವಾದ್ಯ ಪಿತರಂ ತಸ್ಥೌ ವ್ಯಾಸಃ ಸಮಾಹಿತಃ ।
ತತೋ ದಾಶಭಯಾತ್ವಸ್ತೀ ಸ್ನಾತ್ವಾ ಕನ್ಯಾ ಬಭೂವ ಸಾ ॥'' ಇತಿ ।

– ಮಹಾಭಾರತ, ಟಿ.ಆರ್.ಕೃಷ್ಣಾಚಾರ್ಯರ ಸಂಪಾದಕತ್ವದಲ್ಲಿ

ಶಂಕರಾಚಾರ್ಯರು 'ತಥಾ ಹಿ – ಅಪಾಂತರತಮಾ ನಾಮ ವೇದಾಚಾರ್ಯಃ ಪುರಾಣರ್ಷಿರ್ವಿಷ್ಣುನಿಯೋಗಾತ್ಕಲಿದ್ವಾಪರಯೋಃ ಸಂಧೌ ಕೃಷ್ಣದ್ವೈಪಾಯನಃ ಸಂಬಭೂವೇತಿ ಸ್ಮರಂತಿ' (ಶಾಂಕರ ಬ್ರ.ಸೂ.ಭಾ. 3/3/32) ಎಂಬುದಾಗಿ ಶ್ರೀಕೃಷ್ಣದ್ವೈಪಾಯನರು 'ಅಪಾಂತರತಮಸ್' ಎನ್ನುವ ಚೇತನನ ಅವತಾರವೆಂದು ಅಭಿಪ್ರಾಯ ಪಡುತ್ತಾರೆ. ಇದೂ ಕೂಡ ಅಸಾತ್ವಿಕವ್ಯವಹಾರಜನಿತಜ್ಞಾನವೇ ಅರ್ಥಾತ್ ತಾಮಸವು. ಶ್ರೀವೇದವ್ಯಾಸರ ಬಗ್ಗೆ ಉಂಟಾದ ಈ ಜ್ಞಾನವು ಅಂಧಂತಮಸ್ಸಿಗೆ ಸುಗಮವಾದ ಹಾದಿಯಾಗುವುದು. ಆದರೆ ಪುನಃ ಒಂದು ಅವಸ್ಥೆಯಲ್ಲಿ ಶಂಕರಾಚಾರ್ಯರು ಶ್ರೀವೇದವ್ಯಾಸರನ್ನು ಸಾಕ್ಷಾತ್ ಶ್ರೀನಾರಾಯಣನ ಅವತಾರರೆಂದು ಸ್ಫುಟವಾಗಿ ಪ್ರಕಟಿಸಿದರು.

ಕೆಲವು ಅಜ್ಞಾನಿಗಳಾದ ಪಾಶ್ಚಾತ್ಯರು ಉದಾ : ರೋತ್, ವೇಬರ್, ಮಾಕ್ಸ್-ಮುಲ್ಲರ್, ಮ್ಯಾಕ್‌ಡೊನಾಲ್ಡ್, ಕೇಥ್, ಹೋಪ್‌ಕಿನ್ಸ್ ಮೊದಲಾದವರು ಶ್ರೀವ್ಯಾಸರನ್ನು ಮಿಥಿಕಲ್ ಎಂಬುದಾಗಿ ಚಿತ್ರಿಸುತ್ತಾ " Vaishampayana and Vyasa as mentioned, as early as the Taittiriya Aranyaka, but not as authors or editors of the epic which is now their chief claim to recognition(Vide- Cambridge History of India (HOPKINS) Vol-1, page -252)' ಎಂಬುದಾಗಿ ನುಡಿದಿರುವರು. ಇದು ಅತ್ಯಂತಹೇಯವಾದದ್ದು. ಈ ಬಗ್ಗೆ ಮಾನ್ಯ ಡಾ ॥ ಸರ್ವೇಪಲ್ಲಿ ರಾಧಾಕೃಷ್ಣನ್ ಮುಂತಾದವರು ಪೂರ್ವೋದಾಹೃತ westren scholars ಸುಳಿಗೆ ಸಿಕ್ಕಿThe Bhagavadgita By S.Radhakrishnan (Introduction page4)ಹೀಗೆ ಅಭಿಪ್ರಾಯ ಪಡುತ್ತಾರೆ.

"We do not know the name of the author of Gita. Almost all the books belonging to the early literature of India are anonymous. The authorship of the Gita is attributed to Vyasa, the legendary compiler of Mahabharata".

* * * * *